56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ
ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂ:4 ಪಿ.ಡಬ್ಲ್ಯೂ:3

ಪ್ರಮಾಣ ವಚನ ಭೋದಿಸಲಾಯಿತು.

ದಿಃ 29.01.2026

| | |
|---|---|
| ಹೆಸರು | ಚಂದನ್.ವಿ |
| ತಂದೆಯ ಹೆಸರು | ವೆಂಕಟೇಶ್ .ಆರ್ |
| ವಯಸ್ಸು | 24 ವರ್ಷಗಳು |
| ಕೆಲಸ | ಆಟೋ ಚಾಲಕ |
| ವಾಸ | ಕಾಮಾಕ್ಷಿ ಪಾಳ್ಯ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ದಿಃ11.06.2024 ರಂದು ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಬಳಿ ಹೋಗಿದ್ದೆನು. ನನ್ನ ಜೊತೆಗೆ ಚಾಸಾ 5 ರವರು ಬಂದಿದ್ದರು. ಗಿರೀಶ್ ನಾಯಕ್ ಎಂಬ ಪೊಲೀಸ್ ಅಧಿಕಾರಿಯು ಬಂದು ನಮ್ಮ 4 ಜನರನ್ನು ಕರೆದರು. ಇವರಲ್ಲಿ ನಾನು ಮತ್ತು ಚಾಸಾ 5 ರವರು ಹೋದೆವು. ಒಂದು ಕೊಲೆಯಾಗಿದೆ, ಸಾಕ್ಷಿಯಾಗಿ ಶವಾಗಾರದ ಬಳಿ ಹೋಗಬೇಕಾಗಿದೆ ಎಂದು ತಿಳಿಸಿದರು. ಅದಕ್ಕೆ ನಾವು ಒಪ್ಪಿದೆವು. ನಮಗೆ ನೋಟೀಸ್ ಕೊಟ್ಟಿರುತ್ತಾರೆ. ಅಲ್ಲಿಂದ ನಮ್ಮನ್ನು ವಿಕ್ಟೋರಿಯಾ ಆಸ್ಪತ್ರೆಗೆ ಬರುವಂತೆ ಹೇಳಿದರು. ಪೊಲೀಸರನ್ನು ಹಿಂಬಾಲಿಸಿ ನಾನು ಮತ್ತು ಚಾಸಾ 5 ರವರು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ಹೋದೆವು. ನಾನು, ಚಾಸಾ 5, ಚಾಸಾ 6, ಪೊಲೀಸ್ ಸಿಬ್ಬಂದಿ, ಅಜ್ಜಿ, ತಾತ

ಇದ್ದೆವು. ಶವಾಗಾರದ ಒಳಗೆ ಹೋದಾಗ ಶೀತಲ ಪೆಟ್ಟಿಗೆಯಲ್ಲಿಟ್ಟಿದ್ದ ಒಂದು ಶವವನ್ನು ತೆಗೆದರು.

ಆ ಶವವನ್ನು ಅಜ್ಜಿ ತಾತನಿಗೆ ತೋರಿಸಿ ಆ ಶವ ನಿಮ್ಮ ಮಗನದೇ ಎಂದು ಕೇಳಿದರು. ಆ ಅಜ್ಜಿ ತಾತ ಇಬ್ಬರೂ ಆ ಶವ ತಮ್ಮ ಮಗ ರೇಣುಕಾ ಸ್ವಾಮಿಯದ್ದು ಅಂತ ಹೇಳಿದರು. ಶವದ ಮೇಲೆ ಕಪ್ಪು ಮತ್ತು ಗ್ರೇ ಬಣ್ಣದ ಟೀ ಶರ್ಟ್, ನೀಲಿ ಬಣ್ಣದ ಅಂಡರ್ ವೇರ್ ಇತ್ತು. ಆ ಶವಕ್ಕೆ ಹೊಡೆದಿರುವ ಗಾಯಗಳು ಇತ್ತು. ಆ ಶವದ ತಲೆಗೆ, ಕೈಗಳು, ಕಿವಿ, ಬೆನ್ನು, ಎದೆ ಮತ್ತು ಕಾಲುಗಳಿಗೆ ಏಟಾದ ಗಾಯಗಳಾಗಿದ್ದವು. ಆ ಶವವನ್ನು ನಮಗೆ ತೋರಿಸಿ ಅಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು. ಕೊನೆಯದಾಗಿ ಕರೆ ಮಾಡಿದವರು ಯಾರು ಅಂತ ಅಜ್ಜಿ ತಾತನನ್ನು ಕೇಳಿದಾಗ ಅಲ್ಲಿದ್ದ ತಾತ ತನ್ನ ಹೆಂಡತಿಯಾದ ಅಜ್ಜಿ ಕರೆ ಮಾಡಿದ್ದರು ಅಂತ ಹೇಳಿದರು. ಅಜ್ಜಿ ತನ್ನ ಮಗನಿಗೆ ಕರೆ ಮಾಡಿದಾಗ ಆತ ತನ್ನ ಸ್ನೇಹಿತರ ಜೊತೆಗೆ ಹೋಗುತ್ತಿದ್ದೇನೆ ಅಂತ ಹೇಳಿದ್ದನು ಅಂತ ಹೇಳಿದರು. ಟೈಪ್ ಮಾಡಿದ ನಂತರ ನಮ್ಮಿಂದ ರುಜು ಪಡೆದುಕೊಂಡರು. ನಂತರ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿಕೊಟ್ಟರು. ನಿಡಿ.9 ರಲ್ಲಿರುವ ತಮ್ಮ ರುಜುವನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ( ಸಾಕ್ಷಿದಾರರಿಗೆ ಕೊಟ್ಟ ನೋಟೀಸ್ ಪ್ರತಿ ಜೆರಾಕ್ಸ್ ಆಗಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.)

ದಿಃ21.06.2024 ರಂದು ನಾನು ಆಟೋದಲ್ಲಿ ಸತ್ವ ಅಪಾರ್ಟ್ ಮೆಂಟ್ ಬಳಿ ಇದ್ದೆನು. ಸುಬ್ರಹ್ಮಣಿ ಎಂಬ ಇನ್ಸ್ ಪೆಕ್ಟರ್ ಇವರು ನನ್ನ ಬಳಿ

ಬಂದರು. ಒಂದು ಸಿಸಿಟಿವಿ ಫ್ರೂಟೇಜ್ ನೋಡಬೇಕಾಗಿದೆ ಸಾಕ್ಷಿಯಾಗಿ ಬರುತ್ತೀರಾ ಎಂದು ಕೇಳಿದರು. ನಾನು ಮತ್ತು ಚಂದ್ರಕುಮಾರ್ ಪಂಚರಾಗಿ ಹೋಗಲು ಒಪ್ಪಿದೆವು. ಆಗ ನಮಗೆ ನೋಟೀಸ್ ಕೊಟ್ಟಿರುತ್ತಾರೆ. ಅದನ್ನು ರುಜು ಮಾಡಿ ಕೊಟ್ಟಿರುತ್ತೇವೆ. ಆ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ.14 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ನಂತರ ನಾವು ಸತ್ವ ಅಪಾರ್ಟ್ ಮೆಂಟ್ ಬೇಸ್‌ಮೆಂಟ್‌ಗೆ ಹೋದೆವು. ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ದಯಾನಂದ್ ಎಂಬ ಸಿಸಿಟಿವಿ ಮ್ಯಾನೇಜ್ ಮಾಡುವವನನ್ನು ಬೇಟಿಯಾದರು. ಕೊಲೆ ಕೇಸಿನ ಸಿಸಿಟಿವಿ ಫ್ರೂಟೇಜ್ ಬೇಕಾಗಿದೆ ಎಂದು ಹೇಳಿದರು. ಅದಕ್ಕೆ ದಯಾನಂದ್ ಯಾವ ದಿನಾಂಕದಂದು ಎಂದು ಕೇಳಿದರು. ಅದಕ್ಕೆ ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ದಿಃ08.06.2024 ಹಾಗೂ ದಿಃ09.06.2024 ರ ಎರಡು ದಿನದ ಸಿಸಿಟಿವಿ ಫ್ರೂಟೇಜ್ ತೋರಿಸುವಂತೆ ಹೇಳಿದರು. ದಿಃ08.06.2024 ರ ಸುಮಾರು ರಾತ್ರಿ 10.25 ರ ಸಿಸಿಟಿವಿ ಫ್ರೂಟೇಜ್ ನೋಡಿದಾಗ ಆ ಸಮಯಕ್ಕೆ ಒಂದು ಕೆಂಪು ಬಣ್ಣದ ಜೀಪ್ ಬಂದು, ಅದು ಎಡಗಡೆಗೆ ತಿರುಗುವುದು ಕಾಣುತ್ತದೆ. ಆ ಜೀಪ್ ಸುಮ್ಮನಹಳ್ಳಿಯ ಸರ್ವೀಸ್ ರಸ್ತೆಯಿಂದ ಬಂದು ಎಡಕ್ಕೆ ತಿರುಗಿರುತ್ತದೆ. ಸುಮಾರು 5-10 ನಿಮಿಷಗಳ ನಂತರ ಆ ಜೀಪ್ ಮತ್ತೆ ವಾಪಸ್ಸು ಬರುತ್ತದೆ.

ದಿಃ09.06.2024 ರ ರಾತ್ರಿ 1.30 ಗಂಟೆಗೆ ಒಂದು ಬಿಳಿ ಬಣ್ಣದ ಸ್ಕಾರ್ಪಿಯೋ ಬರುತ್ತದೆ. ಅದೂ ಸಹ ಸುಮ್ಮನಹಳ್ಳಿಯ ಸರ್ವೀಸ್ ರಸ್ತೆಯಿಂದ ಬಂದು ಎಡಕ್ಕೆ ತಿರುಗಿರುತ್ತದೆ. ಸುಮಾರು 5-10 ನಿಮಿಷಗಳ ನಂತರ ಆ ವಾಹನ ಮತ್ತೆ ವಾಪಸ್ಸು ಬರುತ್ತದೆ. ಅದರ ಡಿಕ್ಕಿ ಓಪನ್ ಇರುತ್ತದೆ. ಅದಾದ 2-3

ನಿಮಿಷಗಳ ನಂತರ ಮೂರು ಜನ ನಡೆದುಕೊಂಡು ಬರುತ್ತಾರೆ. ಈ ಎಲ್ಲಾ ಘಟನೆಯ ಚಿತ್ರಾವಳಿಯನ್ನು ನಮಗೆ ತೋರಿಸುತ್ತಾರೆ. ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ನಾನು ಮೇಲೆ ಹೇಳಿದ ದೃಶ್ಯಾವಳಿಯನ್ನು ಹೊಸ ಪೆನ್ ಡ್ರೈವ್ ನಲ್ಲಿ ಕಾಪಿ ಮಾಡಿ ಕೊಡುವಂತೆ ದಯಾನಂದ್‌ಗೆ ಹೇಳಿದರು. ಅದರಂತೆ ದಯಾನಂದ್ ಇವರು ಆ ಪೆನ್ ಡ್ರೈವ್ ಗೆ ಕಾಪಿ ಮಾಡಿ ಕೊಟ್ಟರು. ಅದನ್ನು ಒಂದು ಕಾಪಿ ಬಣ್ಣದ ಕವರ್ ನಲ್ಲಿ ಹಾಕಿದರು. ಅದಕ್ಕೆ "ಕೆ" ಎಂಬ ಅಕ್ಷರದಿಂದ ಮೊಹರು ಮಾಡಿದರು. ಅದಕ್ಕೆ ಒಂದು ಸ್ಲಿಪ್ ಅಂಟಿಸಿದ್ದು, ಅದಕ್ಕೆ ನಾನು, ಚಂದ್ರಕುಮಾರ್ ಮತ್ತು ಸುಬ್ರಹ್ಮಣ್ಯ ಇನ್ಸ್ ಪೆಕ್ಟರ್ ಇವರು ರುಜು ಮಾಡಿರುತ್ತೇವೆ. (ಆ ಪೌಚನ್ನು ಸಾಕ್ಷಿದಾರರು ಗುರುತಿಸಿದ್ದು ಆ ಪೌಚ್ ಮೇಲಿರುವ ಸೀಲನ್ನು ಆರೋಪಿ ಪರ ವಕೀಲರಿಗೆ ತೋರಿಸಿದ್ದು ಅವರು ಆ ಸೀಲನ್ನು ಪರಿಶೀಲಿಸಿ ಅದು ಸುಸ್ಥಿತಿಯಲ್ಲಿರುತ್ತದೆ ಅಂತ ದೃಡೀಕರಿಸಿರುತ್ತಾರೆ).

ಪೌಚನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಿದಾಗ ಅದರಲ್ಲಿ ಒಂದು ಪೆನ್ ಡ್ರೈವ್ ಇದ್ದು, ಅದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಅದನ್ನು ಮು.ಮಾ 9 ಎಂದು ಗುರುತಿಸಲಾಯಿತು. ಆ ಪೌಚ್ ಮೇಲಿರುವ ಸಾಕ್ಷಿಯ ರುಜುವನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಸತ್ವ ಅಪಾರ್ಟ್ ಮೆಂಟ್ ಗೇಟ್ ಬಳಿ ಬಂದು, ಅಲ್ಲಿಂದ ಎಷ್ಟು ದೂರದಲ್ಲಿ ಶವ ಬಿದ್ದಿತ್ತು ಅಂತ ನೋಡಿದರು, ಆ ಶವ ಸುಮಾರು 90 ಮೀಟರ್ ಅಂತರದಲ್ಲಿ ಬಿದ್ದಿರುವ ಸ್ಥಳ ಆಗಿತ್ತು. ಆ ಸಮಯದಲ್ಲಿ ಚೆಕ್‌ಬಂಧಿ ಬರೆದುಕೊಂಡರು. ನಾವು ತೋರಿಸಿದ್ದೆಲ್ಲವನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು

ಮಾಡಿಕೊಂಡರು. ಲ್ಯಾಪ್ ಟಾಪ್ ನಿಂದ ಪ್ರಿಂಟ್ ತೆಗೆದುಕೊಂಡು ನನ್ನ ರುಜು ಪಡೆದುಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನೋಡುತ್ತಿದ್ದು ಅದು ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ.15 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ನನ್ನಿಂದ ಮುಚ್ಚಳಿಕೆ ಬರೆಸಿಕೊಂಡರು. ಅದನ್ನು ಈಗ ನೋಡುತ್ತಿದ್ದು ನಿಪಿ.16 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಶವ ಬಿದ್ದ ಸ್ಥಳದಲ್ಲಿ ಪೋಟೋ ತೆಗೆದರು. ಅದೇ ರೀತಿಯಾಗಿ ಸಿಸಿಟಿವಿ ಪ್ಯೂಟೇಜ್ ಇರುವ ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. 4 ಪೋಟೋಗಳ ಒಂದು ದಾಖಲಾತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.17 ಎಂದು, ಸಾಕ್ಷಿದಾರರ ಭಾವಚಿತ್ರವನ್ನು ನಿಪಿ.17(ಎ) ಯಿಂದ ನಿಪಿ.17(ಡಿ ) ಎಂದು ಗುರುತಿಸಲಾಯಿತು. ಶವಾಗಾರದಲ್ಲಿಯೂ ಒಂದು ಪೋಟೋ ತೆಗೆದಿರುತ್ತಾರೆ. ಆ ಪೋಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.6 ರಿಂದ 9 ಎಂದು ಗುರುತಿಸಲಾಗಿದೆ. ನಿಪಿ.6 ರಿಂದ 9 ರಲ್ಲಿ ಕಂಡ ಶವವನ್ನು ಸಾಕ್ಷಿದಾರರು ರೇಣುಕಾ ಸ್ವಾಮಿಯ ಶವ ಎಂದು ಗುರುತಿಸಿರುತ್ತಾರೆ. ನಿಪಿ.6 ಮತ್ತು 8 ರಲ್ಲಿರುವ ಸಾಕ್ಷಿಯ ಭಾವಚಿತ್ರವನ್ನು ನಿಪಿ.6(ಎ) ಮತ್ತು ನಿಪಿ.8(ಎ) ಎಂದು ಗುರುತಿಸಲಾಯಿತು.

ಶವದ ಮೇಲಿದ್ದ ಬಟ್ಟೆಗಳನ್ನು ನೋಡಿದರೇ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಟೀ ಶರ್ಟ್ ಮತ್ತು ಅಂಡರ್ ವೇರನ್ನು ಸಾಕ್ಷಿದಾರರು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

ಈ ಹಂತದಲ್ಲಿ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)

56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ30.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

(ಮು.ಮಾ 9 ರಲ್ಲಿ ಕಂಡ ದೃಶ್ಯಾವಳಿಗಳನ್ನು ಸಾಕ್ಷಿಗೆ ತೋರಿಸುವುದಕ್ಕಿಂತ ಮೊದಲು ಎಲ್ಲಾ ಆರೋಪಿ ಪರ ವಕೀಲರ ಸಮಕ್ಷಮ ಪೆನ್ ಡ್ರೈವ್ ನಲ್ಲಿದ್ದ ದೃಶ್ಯಾವಳಿಗಳನ್ನು ರೈಟ್ ಬ್ಲಾಕರ್ ಮೂಲಕ ಬೇರೆ 8 ಪೆನ್ ಡ್ರೈವ್ ಗಳಿಗೆ ಕಾಪಿ ಮಾಡಿ ಆರೋಪಿ ಪರ ವಕೀಲರಿಗೆ ಪೂರೈಸಲಾಯಿತು.

ಆರೋಪಿ ಪರ ವಕೀಲರು ಮು.ಮಾ 9 ರಲ್ಲಿ ಕಂಡ ದೃಶ್ಯಾವಳಿಗಳನ್ನು ಪ್ಲೇ ಮಾಡಲು ಆಕ್ಷೇಪಣೆ ಮಾಡಿದ್ದು, ಇದಕ್ಕೆ ಪೂರಕವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕೈಲಾಶ್ ವಿರುದ್ದ ಮಹಾರಾಷ್ಟ್ರ ರಾಜ್ಯ (2025 SCC Online SC 1977) ಪ್ರಕರಣದಲ್ಲಿ ತೀರ್ಪು ಜನ್ಯ ಕಾನೂನನ್ನು ಉಲ್ಲೇಖಿಸಿರುತ್ತಾರೆ. ಈಗ ನ್ಯಾಯಾಲಯವು ಈ ಸಾಕ್ಷಿಯು ಮೊದಲು ನುಡಿದ ಸಾಕ್ಷ್ಯವನ್ನು ಗಮನಿಸಿ ಸಾಕ್ಷಿಗೆ ಮು.ಮಾ 9 ರಲ್ಲಿ ಕಂಡ ದೃಶ್ಯಾವಳಿಗಳನ್ನು ತೋರಿಸುವುದಕ್ಕಿಂತ ಮೊದಲೇ ಸತ್ವ ಅಪಾರ್ಟ್ ಮೆಂಟ್ ನಲ್ಲಿ ಅಳವಡಿಸಿರುವ ಸಿಸಿಟಿವಿ ಫ್ಯೂಟೇಜ್ ನಿಂದ ದೃಶ್ಯಾವಳಿಗಳನ್ನು ನೋಡಿರುವ ಬಗ್ಗೆ ಸಾಕ್ಷಿ ನುಡಿದಿರುವುದರಿಂದ ಅಭಿಯೋಜನೆಯವರಿಗೆ ದೃಶ್ಯಾವಳಿಗಳನ್ನು ತೆರೆದ ನ್ಯಾಯಾಲಯದಲ್ಲಿ ಪ್ಲೇ ಮಾಡಿ ಸಾಕ್ಷಿದಾರರಿಗೆ ತೋರಿಸಲು ಅವಕಾಶ ಮಾಡಿ ಕೊಡಲಾಯಿತು).

ಸಾಕ್ಷಿದಾರರಿಗೆ ಮು.ಮಾ 9 ನ್ನು ಲ್ಯಾಪ್ ಟಾಪ್ ಮೂಲಕ ಪ್ಲೇ ಮಾಡಿ ತೋರಿಸಿದಾಗ ದಿಃ08.06.2024 ರ ಸಮಯ 10.36.08 ಕ್ಕೆ ಕೆಂಪು ಬಣ್ಣದ ಜೀಪ್ ಬಂದು ಹೋಗಿರುವುದು ದೃಶ್ಯಾವಳಿಯಲ್ಲಿ ರೆಕಾರ್ಡ್ ಆಗಿರುವುದು ಕಂಡುಬಂದಿರುತ್ತದೆ. ಅದೇ ರೀತಿಯಾಗಿ ದಿಃ09.06.2024 ರ ಬೆಳಗಿನ ಜಾವ 01.18 ರ ದೃಶ್ಯಾವಳಿಯಲ್ಲಿ ಕಂಡಿರುವಂತೆ ಬಿಳಿ ಬಣ್ಣದ ಸ್ಕಾರ್ಪಿಯೋ ವಾಹನ ಬಂದು ಹೋಗಿರುವುದು ಕಂಡುಬಂದಿರುತ್ತದೆ ಮತ್ತು ಸಮಯ ಬೆಳಗಿನ ಜಾವ 1.23 ಕ್ಕೆ ಬಿಳಿ ಬಣ್ಣದ ಸ್ಕಾರ್ಪಿಯೋ ವಾಹನ ವಾಪಸ್ಸು ಹೋಗಿದ ನಂತರ ಮೂರು ಜನ ನಡೆದುಕೊಂಡು ಬರುವುದನ್ನು ಕಂಡು ಗುರುತಿಸಿರುತ್ತಾರೆ.

ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿರುವುದರಿಂದ ಮತ್ತು ಸಾಕ್ಷಿಯು ತನ್ನ ಕೆಲಸದ ಸಮಯವನ್ನು ಮಧ್ಯಾಹ್ನ 2.00 ಗಂಟೆಯವರೆಗೆ ಮಾತ್ರ ಅನುಮತಿಯನ್ನು ಪಡೆದಿದ್ದು, ತನ್ನ ಕೆಲಸಕ್ಕೆ ತೊಂದರೆ ಆಗುತ್ತದೆ ಎಂದು ಹೇಳಿರುವುದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ09.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ **2** ನೇ ಆರೋಪಿ ಪರ ವಕೀಲರಾದ ಶ್ರೀ.ಸಿ.ವಿ.ಎನ್ ರವರಿಂದ

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ದ ಯಾವುದೇ ಪ್ರಕರಣ ದಾಖಲಾಗಿಲ್ಲ. ಈ ಕೇಸನ್ನು ಹೊರತುಪಡಿಸಿ, ಕಾಮಾಕ್ಷಿ ಪಾಳ್ಯ ಪೊಲೀಸರು ದಾಖಲಿಸಿದ ಇನ್ನೊಂದು ಪ್ರಕರಣದಲ್ಲಿ ಸಾಕ್ಷಿಯಾಗಿರುತ್ತೇನೆ. ಆ ಕೇಸು ಸಹ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಿದೆ. ಆ ಕೊಲೆ ಪ್ರಕರಣದಲ್ಲಿಯೂ ಸಹ ನಾನು ಸ್ಥಳ ಮಹಜರ್ ಹಾಗೂ ಅಮಾನತ್ತು ಮಹಜರ್ ಗೆ ಸಾಕ್ಷಿಯಾಗಿರುತ್ತೇನೆ.

ಈ ಕೇಸಿನಲ್ಲಿ ನಾನು ಎರಡು ಮಹಜರ್ ಗಳಿಗೆ ಸಾಕ್ಷಿಯಾಗಿರುತ್ತೇನೆ. ದಿಃ11.06.2024 ಹಾಗೂ ದಿಃ21.06.2024 ರ ಮಹಜರ್ ಗಳಿಗೆ ನಾನು ಸಾಕ್ಷಿಯಾಗಿರುತ್ತೇನೆ. ದಿಃ11.06.2024 ರ ಮಹಜರ್ ನಂತರ ತನಿಖಾಧಿಕಾರಿಯನ್ನು ಪುನಃ ನಾನು ದಿಃ21.06.2024 ಕ್ಕೆ ಮಹಜರ್ ಸಾಕ್ಷಿಗಾಗಿ ನನ್ನನ್ನೇ ಏಕೆ ಕರೆಯುತ್ತೀರಿ ಅಂತ ಕೇಳಿಲ್ಲ.

ಸತ್ವ ಅಪಾರ್ಟ್ ಮೆಂಟ್ ನಲ್ಲಿ ಸುಮಾರು 100 ಮನೆಗಳಿವೆ. ಸತ್ವ ಅಪಾರ್ಟ್ ಮೆಂಟ್ ನ ಪಕ್ಕದಲ್ಲಿಯ ಅಪಾರ್ಟ್ ಮೆಂಟ್‌ನಲ್ಲಿ ಎಷ್ಟು ಮನೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಸತ್ವ ಅಪಾರ್ಟ್ ಮೆಂಟ್‌ನ ಬಲ ಭಾಗಕ್ಕೆ ಹೊಂದಿಕೊಂಡಂತೆ ಒಂದು ಕೈಗಾರಿಕಾ ಯೂನಿಟ್ ಇದೆ. ಆ ಕೈಗಾರಿಕೆಯ ಯೂನಿಟ್ ಹೆಸರು ಕಜಾರಿಯ ಎಟರ್ನಿಟಿ ವರ್ಲ್ಡ್ ಇದೆ ಎಂದರೆ ಸಾಕ್ಷಿದಾರರು

ನಾನು ಗಮನಿಸಿಲ್ಲ ಎಂದು ನುಡಿದಿರುತ್ತಾರೆ. ಕೃತ್ಯ ನಡೆದಿರುತ್ತದೆ ಎನ್ನಲಾದ ಸ್ಥಳವು ಕಜಾರಿಯ ಎಟರ್ನಿಟಿ ವರ್ಲ್ಡ್ ಎಂಬ ಸಂಸ್ಥೆಯ ಮುಂಭಾಗ ಆಗಿದೆ ಎಂದರೆ ಸರಿ. ಕೃತ್ಯ ನಡೆಯಿತು ಎನ್ನಲಾದ ಸ್ಥಳವು ಕಜಾರಿಯ ಎಟರ್ನಿಟಿ ವರ್ಲ್ಡ್ ಗೇಟ್ ಇದೆ ಎಂದರೆ ಸಾಕ್ಷಿದಾರರು ನಾನು ಗಮನಿಸಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ಪೋಟೋ ತೋರಿಸಿದ್ದು ಅದರಲ್ಲಿರುವ ಗೇಟ್ ರಸ್ತೆಗೆ ಲಗತ್ತಾಗಿದೆ ಅಂತ ಹೇಳಿದಾಗಿ ಸಾಕ್ಷಿದಾರರು ಅದನ್ನು ಒಪ್ಪಿ ಕೊಂಡಿರುತ್ತಾರೆ. 2 ನೇ ಆರೋಪಿ ಪರ ವಕೀಲರು ನಿಶಾನೆಯಾಗಿ ಗುರುತಿಸಬೇಕು ಎಂದು ಕೇಳಿಕೊಂಡಿರುವುದರಿಂದ ಸದರಿ ಪೋಟೋವನ್ನು ನಿಡಿ.24 ಎಂದು ಗುರುತಿಸಲಾಯಿತು.

ನಿಡಿ.24 ರ ಮುಂದೆ ಕೃತ್ಯ ನಡೆದ ಸ್ಥಳ ಎಂದರೆ ಸರಿ. ಕಜಾರಿಯ ಎಟರ್ನಿಟಿ ವರ್ಲ್ಡ್ ಕಟ್ಟಡದ ರಸ್ತೆಗೆ ಹೊಂದಿಕೊಂಡಿರುವಂತೆ ಇರುವ ಗೋಡೆಗೆ ಕಿಟಕಿ ಇದೆ ಎಂದರೆ ಸರಿ. ಸಾಕ್ಷಿಗೆ ಆ ಬಗ್ಗೆ ಒಂದು ಪೋಟೋವನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ಒಪ್ಪಿ ಕೊಂಡಿರುತ್ತಾರೆ. 2 ನೇ ಆರೋಪಿ ಪರ ವಕೀಲರು ನಿಶಾನೆಯಾಗಿ ಗುರುತಿಸಬೇಕು ಎಂದು ಕೇಳಿಕೊಂಡಿರುವುದರಿಂದ ಸದರಿ ಪೋಟೋವನ್ನು ನಿಡಿ.25 ಎಂದು ಗುರುತಿಸಲಾಯಿತು. ನಿಡಿ.25 ರಲ್ಲಿ ಕಂಡ ಕಿಟಕಿಯ ಸ್ವಲ್ಪ ದೂರದ ಮೇಲ್ಭಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಇದೆ. ಸಾಕ್ಷಿಗೆ ಆ ಬಗ್ಗೆ ಒಂದು ಪೋಟೋವನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ಒಪ್ಪಿ ಕೊಂಡಿರುತ್ತಾರೆ. 2 ನೇ ಆರೋಪಿ ಪರ ವಕೀಲರು ನಿಶಾನೆಯಾಗಿ ಗುರುತಿಸಬೇಕು ಎಂದು ಕೇಳಿಕೊಂಡಿರುವುದರಿಂದ ಅದನ್ನು ನಿಡಿ.26 ಎಂದು ಗುರುತಿಸಲಾಯಿತು.

ಕಜಾರಿಯ ಎಟರ್ನಿಟಿ ವರ್ಲ್ಡ್ ಗೆ ರೋಲಿಂಗ್ ಶೆಟರ್ ಇದ್ದು, ಸಾಕ್ಷಿಗೆ ಆ ಬಗ್ಗೆ ಒಂದು ಪೋಟೋವನ್ನು ತೋರಿಸಿದಾಗ ಸಾಕ್ಷಿದಾರರು ಅದನ್ನು ಒಪ್ಪಿ ಕೊಂಡಿರುತ್ತಾರೆ. 2 ನೇ ಆರೋಪಿ ಪರ ವಕೀಲರು ನಿಶಾನೆಯಾಗಿ ಗುರುತಿಸಬೇಕು ಎಂದು ಕೇಳಿಕೊಂಡಿರುವುದರಿಂದ ಅದನ್ನು ನಿಡಿ.27 ಎಂದು ಗುರುತಿಸಲಾಯಿತು. ಕಜಾರಿಯ ಎಟರ್ನಿಟಿ ವರ್ಲ್ಡ್ ರೋಲಿಂಗ್ ಶೆಟರ್ ಪಕ್ಕದಲ್ಲಿ ಸಿಸಿಟಿವಿ ಕಾಣುತ್ತದೆ ಎಂದರೆ ಸರಿ. ಅದನ್ನು ನಿಡಿ.27(ಎ) ಎಂದು ಗುರುತಿಸಲಾಯಿತು.

ಪೊಲೀಸರು ಸ್ಥ,ಳಕ್ಕೆ ಬಂದಾಗ ಕಜಾರಿಯ ಎಟರ್ನಿಟಿ ವರ್ಲ್ಡ್ ಕಟ್ಟಡದಲ್ಲಿ ಅಳವಡಿಸಿರುವ ಕಿಟಕಿ, ರೋಲಿಂಗ್ ಶೆಟರ್ ಮತ್ತು ಸಿಸಿ ಟಪಿಟಿವಿ ಕ್ಯಾಮೆರಾಗಳ ಬಗ್ಗೆ ಪರಿಶೀಲಿಸಿಲ್ಲ. ಕಜಾರಿಯ ಎಟರ್ನಿಟಿ ವರ್ಲ್ಡ್ ನ ಒಳಗೆ ಹೋಗಿ ಸಿಸಿಟಿವಿ ಪ್ಯೂಟೇಜ್ ಪಡೆದಿಲ್ಲ. ಕಜಾರಿಯ ಎಟರ್ನಿಟಿ ವರ್ಲ್ಡ್ ನ ಬಾಗಿಲನ್ನು ತೆರೆಸಿಲ್ಲ. ಅದೇ ರೀತಿಯಾಗಿ ಕಜಾರಿಯ ಎಟರ್ನಿಟಿ ವರ್ಲ್ಡ್ ನ ಒಳಗಡೆ ಹೋಗಿಲ್ಲ. ಕಜಾರಿಯ ಎಟರ್ನಿಟಿ ವರ್ಲ್ಡ್ ನ ಸಿಸಿಟಿವಿ ಪ್ಯೂಟೇಜ್ ಅಮಾನತ್ತು ಪಡಿಸಿಕೊಂಡಿಲ್ಲ. ಸಾಮಾನ್ಯವಾಗಿ ಕಟ್ಟಡಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ದಿನದ 24 ಗಂಟೆಗಳ ಕಾಲ ಏನು ವಿದ್ಯಮಾನಗಳು ನಡೆಯುತ್ತವೆ ಎಂದು ತಿಳಿದುಕೊಳ್ಳಲು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುತ್ತಾರೆ.

ಸತ್ವ ಅಪಾರ್ಟ್ ಮೆಂಟ್ ನಲ್ಲಿ ಮತ್ತು ಅದರ ಅಕ್ಕಪಕ್ಕದ ಬಿಲ್ಡಿಂಗ್ ಗಳಲ್ಲಿ ನನ್ನ ವಾಸದ ಸ್ಥಳ ಇರುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ 3-4 ಜನ ಸೆಕ್ಯೂರಿಟಿ ಸಿಬ್ಬಂದಿಗಳು ಇದ್ದರು. ಸತ್ವ ಅಪಾರ್ಟ್ ಮೆಂಟ್ ನಲ್ಲಿರುವ ಸೆಕ್ಯೂರಿಟಿಗಳು ಆ

ಅಪಾರ್ಟ್ ಮೆಂಟ್ ಒಳಗೆ ಹೋಗುವ ವಾಹನಗಳು ಮತ್ತು ಜನರ ಬಗ್ಗೆ ಒಂದು ರಿಜಿಸ್ಟರ್ ನಲ್ಲಿ ನಮೂದು ಮಾಡಿಕೊಳ್ಳುತ್ತಾರೆ. ಸತ್ವ ಅಪಾರ್ಟ್ ಮೆಂಟ್ ಒಳಗಡೆ ಹೋಗುವವರು ಯಾರು, ಯಾವ ಉದ್ದೇಶಕ್ಕಾಗಿ ಹೋಗುತ್ತಿದ್ದಾರೆ ಎಂಬ ಬಗ್ಗೆ ರಿಜಿಸ್ಟರ್ ನಲ್ಲಿ ನಮೂದಿಸಿ ಅವರಿಂದ ರುಜು ಪಡೆದುಕೊಳ್ಳುತ್ತಾರೆ.

ಆ ದಿನ ನಾನು ಸತ್ವ ಅಪಾರ್ಟ್ ಮೆಂಟ್ ಒಳಗಡೆ ಹೋಗುವ ಕಾಲಕ್ಕೆ ಸೆಕ್ಯೂರಿಟಿಯವರ ಬಳಿ ಇರುವ ರಿಜಿಸ್ಟರ್ ನಲ್ಲಿ ನಮೂದು ಮಾಡಿಸಿರುವುದಿಲ್ಲ. ನನ್ನ ಹೆಸರು ಮತ್ತು ವಿಳಾಸವನ್ನೂ ಸಹ ನಮೂದು ಮಾಡಿಸಿರುವುದಿಲ್ಲ. ನನ್ನ ಜೊತೆಗೆ ಬಂದ ಚೆಂದು ಕುಮಾರ್ ಇವರೂ ಸಹ ಸೆಕ್ಯೂರಿಟಿ ಬಳಿ ಇರುವ ರಿಜಿಸ್ಟರ್ ನಲ್ಲಿ ಹೆಸರು ಮತ್ತು ವಿಳಾಸ ನಮೂದಿಸಿ ರುಜು ಮಾಡಿಲ್ಲ. ಸತ್ವ ಅಪಾರ್ಟ್ ಮೆಂಟ್‌ನ ಒಳಗಡೆ ಹೋಗುವಾಗ ಪೊಲೀಸರು ಗೂಂಡಾ ವರ್ತನೆ ಮಾಡಿಲ್ಲ. ನಮ್ಮ ಜೊತೆಗಿದ್ದ ಪೊಲೀಸ್ ತನಿಖಾಧಿಕಾರಿಯು ಸತ್ವ ಅಪಾರ್ಟ್ ಮೆಂಟ್ ಸೆಕ್ಯೂರಿಟಿ ಬಳಿ ಇರುವ ರಿಜಿಸ್ಟರ್ ನಲ್ಲಿ ಹೆಸರು ಮತ್ತು ವಿಳಾಸವನ್ನು ನಮೂದಿಸಿ ರುಜು ಮಾಡಿರುತ್ತಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಸತ್ವ ಅಪಾರ್ಟ್ ಮೆಂಟ್‌ನಲ್ಲಿರುವ ದಯಾನಂದ್ ಇವರು ನಮಗೆ ದಿಃ08.06.2024 ರ 10.25 ಗಂಟೆಯ ಹಾಗೂ ದಿಃ09.06.2024 ರ ರಾತ್ರಿ 1.30 ರ ಸಿಸಿಟಿವಿ ಫ್ಯೂಟೇಜನ್ನು ಹೊರತುಪಡಿಸಿ ಬೇರೆ ಯಾವುದೂ ಫುಟೇಜ್ ತೋರಿಸಿಲ್ಲ. ದಯಾನಂದ್ ಇವರು ಪೊಲೀಸರಿಗೆ ಪೆನ್‌ಡ್ರೈವ್ ನಲ್ಲಿ ಸಿಸಿಟಿವಿಯಲ್ಲಿರುವ ದಿಃ08.06.2024 ರ 10.25 ಗಂಟೆಯ ಹಾಗೂ ದಿಃ09.06.2024 ರ ರಾತ್ರಿ 1.30 ರ ಚಿತ್ರಾವಳಿಗಳನ್ನು ಕಾಪಿ ಮಾಡಿ

ಕೊಟ್ಟಿರುತ್ತಾರೆ. ಸತ್ವ ಅಪಾರ್ಟ್ ಮೆಂಟ್‌ನಲ್ಲಿ ನಮಗೆ ತೋರಿಸಿದ ಸಿಸಿಟಿವಿ ಫ್ಯೂಟೇಜ್ ನಲ್ಲಿ ದಿಃ10.06.2024 ರಂದು ರಾತ್ರಿ 10.25 ಗಂಟೆಗೆ ಕೆಂಪು ಬಣ್ಣದ ಜೀಪ್ ಹಾಗೂ ದಿಃ09.06.2024 ರ ರಾತ್ರಿ 1.30 ಗಂಟೆಯಲ್ಲಿ ಬಿಳಿ ಬಣ್ಣದ ಸ್ಕಾರ್ಪಿಯೋ ಬಂದು ಹೋಗಿರುವುದನ್ನು ನೋಡಿರುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಮು.ಮಾ 9 ರಲ್ಲಿ  ಚಿತ್ರಾವಳಿಯಾಗಿರುವ ವಿಡಿಯೋವನ್ನು ತೋರಿಸಿ ದಿಃ08.06.2024 ರ ರಾತ್ರಿ 10:28:35 ನಂತರ ರೆಕಾರ್ಡ್ ಆದ ಚಿತ್ರಾವಳಿ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಗೆ ಮು.ಮಾ 9 ರಲ್ಲಿ ಚಿತ್ರಾವಳಿಯಾಗಿರುವ ವಿಡಿಯೋವನ್ನು ತೋರಿಸಿ ದಿಃ09.06.2024 ರ ರಾತ್ರಿ 01:30:02 ಸಮಯದಲ್ಲಿ ಒಂದು ವಾಟರ್ ಟ್ಯಾಂಕ್ ಸತ್ವ ಅಪಾರ್ಟ್ ಮೆಂಟ್ ಗೇಟಿನಿಂದ ಹೊರಗೆ ಹೋಗುವುದು ಕಾಣುತ್ತದೆ ಎಂದರೆ ಸರಿ. ದಿಃ09.06.2024 ರಾತ್ರಿ 1.30 ಗಂಟೆಗೆ ಸಿಸಿಟಿವಿ ಬ್ಲರ್ ಆಗಿರುತ್ತದೆ ಎಂದರೆ ಸಾಕ್ಷಿದಾರರು ಕ್ಲಿಕ್ ಮಾಡಿದಾಗ ಬ್ಲರ್ ಆಗಿ ಕಾಣುತ್ತದೆ ಎಂದು ನುಡಿದಿರುತ್ತಾರೆ.

ಕಾರ್  ಡಿಕ್ಕಿಯಲ್ಲಿ ಲಗೇಜ್ ಹಾಕುತ್ತಾರೆ, ಅದು ಡೋರ್ ಅಲ್ಲ ಎಂದರೆ ಸರಿ.  ನಿಪಿ.15 ರ ಪುಟ ಸಂಖ್ಯೆ ಮೂರು ( ಚಾರ್ಜ್ ಶೀಟ್ ಪುಟ ಸಂಖ್ಯೆ 839) ರಲ್ಲಿ ಮೊದಲಿನ ಎರಡು ಸಾಲುಗಳಲ್ಲಿ ಸದರಿ ವಾಹನದ ಹಿಂದಿನ ಬಾಗಿಲು ತೆರೆದಿರುವುದು ಕಂಡುಬಂತು ಅಂತ ಬರೆಯಲಾಗಿದೆ. ಹೀಗೆ ಬರೆಯಲಾಗಿರುವಂತೆ ನಾನು ಸಿಸಿಟಿವಿಯಲ್ಲಿ ನೋಡಿರುವಂತೆ ವಾಹನದ ಹಿಂದಿನ ಬಾಗಿಲು ತೆರೆದಿರುವುದು ಕಂಡುಬಂತು.

ಮು.ಮಾ.9 ರಲ್ಲಿ ಕಳೆದ ಬಾರಿ ನನ್ನ ಮುಖ್ಯ ವಿಚಾರಣೆಯ ಕಾಲಕ್ಕೆ ದೃಶ್ಯಾವಳಿಯನ್ನು ತೋರಿಸಿದಾಗ ಡಿಕ್ಕಿ ತೆರೆದಿತ್ತು ಎಂದರೆ ಡಿಕ್ಕಿ ಬಾಗಿಲು ತೆರೆದಿತ್ತು ಎಂದು ನುಡಿದಿರುತ್ತಾರೆ. ದಿಃ21.06.2024 ರಂದು ನನಗೆ ತೋರಿಸಲಾದ ಸಿಸಿಟಿವಿ ಫ್ಯೂಟೇಜಿನ ದೃಶ್ಯಾವಳಿಯಲ್ಲಿ ಸತ್ವ ಅಪಾರ್ಟ್ ಮೆಂಟ್ ಮುಂಭಾಗದ ರಸ್ತೆಯಲ್ಲಿ ಲಾರಿಗಳು, ಬೈಕ್ ಮತ್ತು ಕಾರುಗಳು ಸಂಚರಿಸಿರುವುದು ಕಂಡುಬಂದಿರುತ್ತದೆ. ದಯಾನಂದ್ ಇವರು ಸಿಸಿಟಿವಿ ಫ್ಯೂಟೇಜನ್ನು ತೋರಿಸಿ, ಮಹಜರ್ ಬರೆಯಲು ಒಕ್ಕಣೆ ಕೊಟ್ಟು ಅವರು ರುಜು ಮಾಡಿರುತ್ತಾರೆ. ಪಂಚನಾಮೆಗೆ ನಾನು, ಚಂದುಕುಮಾರ್ ಹಾಗೂ ದಯಾನಂದ್ ಇವರು ರುಜು ಮಾಡಿದ ನಂತರ ನಮ್ಮ ವಿಳಾಸ ಬರೆದಿರುತ್ತೇವೆ. ನಿಪಿ.15 ಮಹಜರ್ ನಲ್ಲಿ ನಾವು ರುಜು ಮಾಡಿದ ಕೆಳಭಾಗದಲ್ಲಿ ದಿನಾಂಕ 21.06.2024 ಎಂದು ನಮೂದಿಸಿರುತ್ತೇವೆ. ನಿಪಿ.15 ರ ಮಹಜರ್ ನಲ್ಲಿ ನಾವು ರುಜು ಮಾಡಿದ ನಂತರ ಹೆಸರು, ವಿಳಾಸ, ದಿನಾಂಕ ಬರೆದು ನಂತರ ಮೊಬೈಲ್ ನಂಬರ್ ಬರೆದಿರುತ್ತೇವೆ.

ನಾನು ರುಜು ಹಾಕಿ, ಹೆಸರು, ವಿಳಾಸ, ದಿನಾಂಕ ಮತ್ತು ಮೊಬೈಲ್ ನಂಬರ್ ಬರೆದ ಮಹಜರ್ ನ್ನು ತೋರಿಸಿದ್ದಲ್ಲಿ ಆ ದಿನ ಸತ್ವ ಅಪಾರ್ಟ್ ಮೆಂಟ್ ಬಳಿ ಮಾಡಲಾದ ಮಹಜರ್ ಎಂದು ಗುರುತಿಸುತ್ತೇನೆ. ನಿಪಿ.15 ರ ಕೊನೆಯ ಪುಟದಲ್ಲಿ ನಾನು, ಚಂದುಕುಮಾರ್ ಹಾಗೂ ದಯಾನಂದ್ ರವರು ರುಜು ಮಾಡಿದ ಕೆಳಭಾಗದಲ್ಲಿ ನಮ್ಮ ಹೆಸರು, ವಿಳಾಸ, ದಿನಾಂಕ ಮತ್ತು ಮೊಬೈಲ್ ನಂಬರ್ ನಮೂದು ಇರುವುದಿಲ್ಲ. ದಿಃ21.06.2024 ರಂದು ಸತ್ವ ಅಪಾರ್ಟ್ ಮೆಂಟ್ ಒಳಗೆ ಹೋಗುವಾಗ ಒಮ್ಮೆ ರುಜು ಹಾಗೂ ಹೊರಗೆ ಬರುವಾಗ

ಇನ್ನೊಮ್ಮೆ ರುಜು ಮಾಡಿರುತ್ತೇನೆ. ಈ ಎರಡೂ ರುಜುಗಳನ್ನು ಹೊರತುಪಡಿಸಿ ಬೇರೆ ರುಜು ಮಾಡಿರುವುದಿಲ್ಲ. ನಿಪಿ.15 ರ ಕೊನೆಯ ಪುಟದಲ್ಲಿಯ ಕಾಲಂ ನಂ.10 ಮತ್ತು 11 ರಲ್ಲಿ ರುಜು ಮಾಡಿರುವವರು ಯಾರು ಎಂದು ನನಗೆ ಗೊತ್ತಿಲ್ಲ.

ನಿಪಿ.15 ಕ್ಕೆ ಮೊದಲಿಗೆ ನಾನು ರುಜು ಮಾಡಿ ಪಕ್ಕಕ್ಕೆ ಸರಿದ ಬಳಿಕ ಚಂದು ಕುಮಾರ್ ರುಜು ಮಾಡಿದ್ದು, ಆತ ಪಕ್ಕಕ್ಕೆ ಸರಿದ ಬಳಿಕ ಯಾರು ರುಜು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಗಮನಿಸಿಲ್ಲ ಎಂದು ನುಡಿದಿರುತ್ತಾರೆ. ನಿಪಿ.15 ಮಹಜರನ್ನು ನಾನು ಹೇಳಿ ಬರೆಸಿಲ್ಲ. ಅದೇ ರೀತಿಯಾಗಿ ಚಂದುಕುಮಾರ್ ಸಹ ನಿಪಿ.15 ಮಹಜರನ್ನು ಹೇಳಿ ಬರೆಸಿಲ್ಲ. ನಿಪಿ.15 ಮಹಜರ್ ಮುಗಿದ ಬಳಿಕ ನನ್ನ, ಚಂದುಕುಮಾರ್ ಹಾಗೂ ದಯಾನಂದ್ ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆ ಯಲ್ಲಿ ನನ್ನ ವಿರುದ್ಧ ಹಲವಾರು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು ನಾನು ಆ ಠಾಣೆಯ ಸ್ಟಾಕ್ ಸಾಕ್ಷಿದಾರ ಅಲ್ಲ ಎಂದರೆ ಸರಿಯಲ್ಲ. ದಿಃ21.06.2024 ರಂದು ಸತ್ವ ಅಪಾರ್ಟ್‌ಮೆಂಟ್ ಬಳಿ ಮಹಜರ್ ಮಾಡಿರುತ್ತಾರೆ ಮತ್ತು ಸಿಸಿಟಿವಿ ಫ್ಯೂಟೇಜ್ ತೋರಿಸಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.15 ಕ್ಕೆ ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ11.06.2024 ರ ಶವ ಮಹಜರ್ ಗೆ ನಾನು ರುಜು ಮಾಡಿದ ನಂತರ ನನ್ನ ಹೆಸರು, ವಿಳಾಸ, ಮೊಬೈಲ್ ನಂಬರ್ ಬರೆದಿರುತ್ತೇನೆ. ಅದೇ

ರೀತಿಯಾಗಿ ದಿನಾಂಕ ಸಹ ಬರೆದಿರುತ್ತೇನೆ. ನನ್ನ ಜೊತೆಗಿದ್ದ ಇನ್ನೊಬ್ಬ ಪಂಚರೂ ಸಹ ರುಜು ಮಾಡಿದ ನಂತರ ತಮ್ಮ ಹೆಸರು, ವಿಳಾಸ, ದಿನಾಂಕ ಮತ್ತು ಮೊಬೈಲ್ ನಂಬರ್ ಹಾಕಿದರು ಎಂದರೆ ಸರಿ. ದಿಃ11.06.2024 ರಂದು ಶವಾಗಾರದ ಒಳಗೆ ಹೋಗುವಾಗ ನೋಟೀಸಿಗೆ ರುಜು ಮಾಡಿರುತ್ತೇನೆ, ಮಹಜರ್ ಆದ ನಂತರ ಮಹಜರ್ ಗೆ ರುಜು ಮಾಡಿರುತ್ತೇನೆ.

ದಿಃ11.06.2024 ರ ಶವ ಮಹಜರ್ ಗೆ ಮೃತನ ತಂದೆ -ತಾಯಿಗಳು ಭಾಗವಹಿಸಿದ್ದರು. ಶವ ಮಹಜರ್ ಗೆ ನಾವು ರುಜು ಮಾಡಿರುತ್ತೇವೆ. ಮೃತನ ತಂದೆ - ತಾಯಿಗಳು ರುಜು ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಶವ ಮಹಜರ್ ನಲ್ಲಿಯ ನಿಡಿ.9 ರಲ್ಲಿ ಬರೆದ ಭಾಗವನ್ನು ಮೃತನ ತಾಯಿಯ ಹೇಳಿಕೆಯ ಆಧಾರದ ಮೇಲೆ ಬರೆದಿರುತ್ತಾರೆ. ಶವ ಮಹಜರ್ ನಲ್ಲಿ ನಾನು ರುಜು ಮಾಡಿ ಹೆಸರು, ವಿಳಾಸ, ದಿನಾಂಕ ಮತ್ತು ಮೊಬೈಲ್ ನಂಬರನ್ನು ಬರೆದ ಮಹಜರನ್ನು ನೋಡಿದರೇ ಗುರುತಿಸುತ್ತೇನೆ. ನಿಡಿ.9(ಎ) ನಲ್ಲಿ ನಾನು ಮತ್ತು ಇನ್ನೊಬ್ಬ ರುಜು ಮಾಡಿದ ಸ್ಥಳದಲ್ಲಿ ಹೆಸರು, ವಿಳಾಸ, ದಿನಾಂಕ ಮತ್ತು ಮೊಬೈಲ್ ನಂಬರ್ ಇರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ಹೆಸರು ಮಾತ್ರ ನಮೂದು ಇರುತ್ತದೆ ಎಂದು ನುಡಿದಿರುತ್ತಾರೆ. ದಿಃ11.06.2024 ಶವ ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀ**.**ಎಸ್**.**ಬಿ ವಕೀಲರಿಂದಃ</u>

ಈ ಕೇಸನ್ನು ಹೊರತುಪಡಿಸಿ ಬೇರೆ ಪ್ರಕರಣಗಳಲ್ಲೂ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಿಃ11.06.2024 ರಂದು ಬೆಳಗ್ಗೆ 8.00 ರಿಂದ 9.00 ಗಂಟೆಯವರೆಗೆ ನಮ್ಮ ಮನೆ ಬಳಿ ಇದ್ದೆನು. ಸತ್ವ ಅಪಾರ್ಟ್ ಮೆಂಟ್ ನಿಂದ ನಮ್ಮ ಮನೆ ಒಂದು ಕಿ.ಮೀಟರ್ ದೂರದಲ್ಲಿದೆ. ದಿಃ11.06.2024 ರ ಬೆಳಗ್ಗೆ 9.00 ರಿಂದ 9.30 ಗಂಟೆ ಸಮಯದಲ್ಲಿ ನನ್ನ ಆಟೋದಲ್ಲಿ ಯಾರು ಪ್ಯಾಸೆಂಜರ್ ಇರಲಿಲ್ಲ. ನನ್ನ ಆಟೋ ಸ್ಟ್ಯಾಂಡ್ ಕಾಮಾಕ್ಷಿಪಾಳ್ಯ ಆಟೋ ಸ್ಟ್ಯಾಂಡ್ ನಲ್ಲಿದೆ. ದಿಃ11.06.2024 ರಂದು ಕಾಮಾಕ್ಷಿ ಪಾಳ್ಯ ಆಟೋ ಸ್ಟ್ಯಾಂಡ್‌ಗೆ ಎಷ್ಟು ಗಂಟೆಗೆ ಹೋದೆ ಎನ್ನುವುದು ನೆನಪಿಲ್ಲ. ಆ ದಿನ ಎಷ್ಟು ಆಟೋಗಳ ನಂತರ ನನ್ನ ಆಟೋ ನಂಬರ್ ನಲ್ಲಿತ್ತು ಎನ್ನುವುದು ಗೊತ್ತಿಲ್ಲ. ದಿಃ11.06.2024 ರಂದು ಯಾರೂ ನನ್ನ ಆಟೋ ಹತ್ತಿಲ್ಲ ಮತ್ತು ನಾನು ಬಾಡಿಗೆಗೆ ಹೋಗಿಲ್ಲ. ದಿಃ11.06.2024 ರಂದು ನಾನು ಆಟೋ ಓಡಿಸಿರುತ್ತೇನೆ. ದಿಃ11.06.2024 ರಂದು ಸಂಜೆ 4.00 ರಿಂದ 6.00 ಗಂಟೆಯಲ್ಲಿ ಎಲ್ಲಿದ್ದೀರಿ ಎಂದರೆ ಸಾಕ್ಷಿದಾರರು ಆ ದಿನ ಸಂಜೆ 4.30 ಗಂಟೆಯವರೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದು ನಂತರ ಮನೆಯಲ್ಲಿದ್ದೆ ಎಂದು ನುಡಿದಿರುತ್ತಾರೆ. ದಿಃ11.06.2024 ರಂದು ನಾನು ಆಟೋಗೆ ಗ್ಯಾಸ್ ಹಾಕಿಸಿಕೊಂಡಿಲ್ಲ.

ದಿಃ21.06.2024 ರಂದು ಬೆಳಗ್ಗೆ 8.00 ರಿಂದ 10.00 ಗಂಟೆಯವರೆಗೆ ಸತ್ವ ಅಪಾರ್ಟ್ ಮೆಂಟ್ ಬಳಿ ನನ್ನ ಆಟೋ ನಿಲ್ಲಿಸಿಕೊಂಡಿದ್ದೆನು. ಕಾಮಾಕ್ಷಿ ಪಾಳ್ಯ ಆಟೋ ಸ್ಟ್ಯಾಂಡ್‌ನಿಂದ ಸತ್ವ ಅಪಾರ್ಟ್ ಮೆಂಟ್ ಮಧ್ಯೆ 500 ಮೀಟರ್ ಅಂತರ ಇದೆ. ಆ ದಿನ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00

ಗಂಟೆಯವರೆಗೆ ಸತ್ವ ಅಪಾರ್ಟ್ ಮೆಂಟ್‌ನಲ್ಲಿದ್ದೆನು. ದಿಃ21.06.2024 ರಂದು ಬೆಳಗ್ಗೆ 8.00 ಗಂಟೆಯಿಂದ ಸತ್ವ ಅಪಾರ್ಟ್ ಮೆಂಟ್‌ಗೆ ಯಾವ ಪ್ಯಾಸೆಂಜರ್ ಕರೆದುಕೊಂಡು ಹೋಗಿದ್ದೆ ಎಂದು ನೆನಪಿಲ್ಲ. ದಿಃ21.06.2024 ರಂದು ನಾನು ಕಾಮಾಕ್ಷಿ ಪಾಳ್ಯ ಆಟೋ ಸ್ಟಾಂಡ್‌ಗೆ ಹೋಗಿಲ್ಲ. ದಿಃ21.06.2024 ರಂದು ಬೆಳಗ್ಗೆ ಬಾಡಿಗೆಗೆ ಹೋಗಬೇಕೆಂದು ಮನೆ ಬಿಟ್ಟೆನು. ದಿಃ21.06.2024 ರಂದು ಕಾಮಾಕ್ಷಿಪಾಳ್ಯ ಆಟೋ ಸ್ಟಾಂಡ್ ಗೆ ಹೋಗಬೇಕೆಂದು ನಿರ್ಧರಿಸಿ ಮನೆ ಬಿಟ್ಟೆನು. ಅದರಂತೆ ನಾನು ಕಾಮಾಕ್ಷಿಪಾಳ್ಯ ಆಟೋ ಸ್ಟಾಂಡ್ ಗೆ ಹೋದೆನು.

ಸತ್ವ ಅಪಾರ್ಟ್ ಮೆಂಟ್‌ಗೆ ಹೋಗಬೇಕೆಂದು ನನಗೆ ಯಾರೂ ಹೇಳಿಲ್ಲ. ಸತ್ವ ಅಪಾರ್ಟ್ ಮೆಂಟ್‌ಗೆ ಹೋಗುವ ಉದ್ದೇಶ ಇರಲಿಲ್ಲ. ದಿಃ21.06.2024 ರಂದು ಬೆಳಗ್ಗೆ 8.00 ರಿಂದ 10.00 ಗಂಟೆಯವರೆಗೆ ಸತ್ವ ಅಪಾರ್ಟ್ ಮೆಂಟ್ ಬಳಿ ಬಾಡಿಗೆಗಾಗಿ ಕಾಯುತ್ತಿದ್ದೆನು. ಸತ್ವ ಅಪಾರ್ಟ್ ಮೆಂಟ್ ಬಳಿ ಆಟೋ ಸ್ಟಾಂಡ್ ಇಲ್ಲ. ಸತ್ವ ಅಪಾರ್ಟ್ ಮೆಂಟ್ ಬಳಿ ಆಟೋ ಸ್ಟಾಂಡ್ ಮಾಡಲು ಯಾರೂ ಅವಕಾಶ ಕೊಡುವುದಿಲ್ಲ. ದಿಃ21.06.2024 ರಂದು ಬೆಳಗ್ಗೆ 10.00 ಗಂಟೆಯಿಂದ 12.00 ಗಂಟೆಯವರೆಗೆ ಬಾಡಿಗೆ ಬರುತ್ತದೆ ಅಂತ ಸತ್ವ ಅಪಾರ್ಟ್ ಮೆಂಟ್ ಬಳಿ ಇದ್ದೆನು.

ಪ್ರತಿದಿನ ನಾನು ಬಾಡಿಗೆಗಾಗಿ ಕಾಮಾಕ್ಷಿಪಾಳ್ಯ ಆಟೋ ಸ್ಟಾಂಡ್ ಗಾಗಿ ಹೋಗುತ್ತೇನೆ. ಸತ್ವ ಅಪಾರ್ಟ್ ಮೆಂಟ್ ಬಳಿ ಹೋಗುವುದಿಲ್ಲ. ಸಾಕ್ಷಿದಾರರು ಮುಂದುವರಿದು ಕೆಲವೊಮ್ಮೆ ಸತ್ವ ಅಪಾರ್ಟ್ ಮೆಂಟ್ ಬಳಿ ಬಾಡಿಗೆಗಾಗಿ ಹೋಗುತ್ತೇನೆ ಎಂದು ನುಡಿದಿರುತ್ತಾರೆ. ದಿಃ21.06.2024 ರಂದು ಬಾಡಿಗೆ

ಆಗಿಲ್ಲ. ಕಾಮಾಕ್ಷಿ ಪಾಳ್ಯ ಆಟೋ ಸ್ಟಾಂಡ್ ಬಳಿ ಆಟೋ ಹಾಕಿದ್ದಲ್ಲಿ ಪ್ಯಾಸೆಂಜರ್ ಸಿಗುತ್ತಾರೆ. ದಿಃ21.06.2024 ರಂದು ಮಧ್ಯಾಹ್ನ 12.00 ರಿಂದ 2.00 ಗಂಟೆಯವರೆಗೆ ಸತ್ವ ಅಪಾರ್ಟ್ ಮೆಂಟ್ ಬಳಿ ಬಾಡಿಗೆಗಾಗಿ ಕಾಯುತ್ತಿದ್ದೆನು. ಆ ದಿನ ರಾತ್ರಿ 8.00 ಗಂಟೆಯಿಂದ 10.00 ಗಂಟೆಯವರೆಗೆ ಮನೆಯಲ್ಲಿದ್ದೆನು. ದಿಃ21.06.2024 ರಂದು ಬಾಡಿಗೆಗೆ ಹೋಗಿಲ್ಲ, ಸಂಪಾದನೆ ಮಾಡಿಲ್ಲ ಹಾಗೂ ಗ್ಯಾಸ್ ಹಾಕಿಸಿಲ್ಲ. ಸತ್ವ ಅಪಾರ್ಟ್ ಮೆಂಟ್‌ನಿಂದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಒಂದು ಕಿ.ಮೀ ಅಂತರ ಇದೆ.

ಕಾಮಾಕ್ಷಿಪಾಳ್ಯ ಪೊಲೀಸರಿಗೆ ನನ್ನ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರನ್ನು ನಾನೇ ಕೊಟ್ಟಿರುತ್ತೇನೆ. ದಿಃ11.06.2024 ರಂದು ಬೆಳಗ್ಗೆ 10.30 ಗಂಟೆಗೆ ನನ್ನ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರ್ ಕೊಟ್ಟಿರುತ್ತೇನೆ. ಪೊಲೀಸರು ನನಗೆ ನೋಟೀಸ್ ಕೊಟ್ಟ ಬಳಿಕ ನನ್ನ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರ್ ಕೊಟ್ಟಿರುತ್ತೇನೆ. ದಿಃ11.06.2024 ರಂದು ನಾನು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಹೋಗುವ ಅವಶ್ಯಕತೆ ಇರಲಿಲ್ಲ. ನಾನು ಆ ದಿನ ಯಾವ ಪ್ಯಾಸೆಂಜರನ್ನು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುವುದಿಲ್ಲ. ದಿಃ11.06.2024 ರಂದು ನಾನು ಮತ್ತು ಧನುಶ್ ಬೆಳಗ್ಗೆ 10.30 ಗಂಟೆಗೆ ಎಲ್ಲಿಗೆ ಹೋಗಬೇಕೆಂದು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆ ಬಳಿ ಹೋಗುತ್ತಿದ್ದೆವು. ಧನುಶ್ ಈತ ಕ್ಯಾಬ್ ಚಾಲಕ. ನಾನು ಮತ್ತು ಧನುಶ್ ದಿಃ11.06.2024 ರಂದು ಆಟೋದಲ್ಲಿ ಜಾಲಿ ಟ್ರಿಪ್ ಹೋಗಿದ್ದೆವು. ಆ ದಿನ ನಾನು ಸಂಪಾದನೆ ಮಾಡಲು ಮನೆಯಿಂದ ಹೊರಟಿದ್ದೆನು. ನನ್ನ ಬಳಿ Android ಮೊಬೈಲ್ ಇತ್ತು.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ 1 ನೇ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ10.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀ.ಎಸ್.ಬಿ ವಕೀಲರಿಂದಃ

ಪೊಲೀಸ್ ಠಾಣೆಯಲ್ಲಿ ನಾನು ಸುಮಾರು 10 ರುಜುಗಳನ್ನು ಮಾಡಿರಬಹುದು. ಹೀಗೆ ಠಾಣೆಯಲ್ಲಿ ರುಜು ಮಾಡಿದ 10 ರುಜುಗಳ ಪೈಕಿ ನಿಪಿ.15(ಎ) ಠಾಣೆಯಲ್ಲಿ ಮಾಡಿದ ರುಜು ಆಗಿದೆ. ನಿಪಿ.16(ಎ) ದಲ್ಲಿ ಮಾಡಲಾದ ರುಜುವು 10 ರುಜುಗಳಲ್ಲಿ 2 ನೇ ರುಜು ಎಂದರೆ ಸರಿ. ನಿಪಿ.15 ರ 1 ರಿಂದ 3 ನೇ ಪುಟಗಳಲ್ಲಿರುವ ರುಜುಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸ್ ಠಾಣೆಗೆ ಹೋಗಿ ರುಜು ಮಾಡಿದ ಬಳಿಕ ಸ್ಥಳಕ್ಕೆ ಹೋಗಿ ನಿಪಿ.17 (ಎ) ದಿಂದ 17(ಡಿ) ಫೋಟೋಗಳನ್ನು ಸ್ಥಳದಲ್ಲಿ ತೆಗೆಯಲಾಗಿದೆ ಎಂದರೆ ಸರಿ.

ನಿಪಿ.17(ಡಿ) ಯಲ್ಲಿ ಕಾಣುವ ಫೋಟೋವನ್ನು 3 ನೇ ಮಹಡಿಯಲ್ಲಿ ತೆಗೆಯಲಾಗಿದೆ ಎಂದರೆ ಸಾಕ್ಷಿದಾರರು ಬೇಸ್‌ಮೆಂಟ್ ನಲ್ಲಿ ತೆಗೆಯಲಾಗಿದೆ ಎಂದು ನುಡಿದಿರುತ್ತಾರೆ. ಸತ್ವ ಅಪಾರ್ಟ್ ಮೆಂಟ್ ನಲ್ಲಿ ಎರಡು ಬೇಸ್‌ಮೆಂಟ್ ಗಳು ಇವೆ ಎಂದರೆ ಸಾಕ್ಷಿದಾರರು ಒಂದು ಬೇಸ್‌ಮೆಂಟ್ ಇದೆ ಎಂದು ನುಡಿದಿರುತ್ತಾರೆ. ಸತ್ವ ಅಪಾರ್ಟ್ ಮೆಂಟ್‌ನಲ್ಲಿ ಎರಡು ಬೇಸ್‌ಮೆಂಟ್ ಗಳು ಇದ್ದರೂ ಒಂದೇ ಬೇಸ್‌ಮೆಂಟ್ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.15 ಮಹಜರ್ ನಲ್ಲಿ 1 ನೇ ಬೇಸ್‌ಮೆಂಟ್ ನಲ್ಲಿ ಮಹಜರ್ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿದಾರರು ಸತ್ವ ಅಪಾರ್ಟ್

ಮೆಂಟ್‌ನಲ್ಲಿ ಒಂದೇ ಬೇಸ್‌ಮೆಂಟ್ ಇದೆ ಎಂದು ನುಡಿದಿರುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **11** ಮತ್ತು **12** ನೇ ಆರೋಪಿ ಪರ ವಕೀಲರಾದ ಶ್ರೀ.ಎಸ್.ಕೆ.ಎಸ್ ರವರಿಂದಃ

ನಮ್ಮ ಮನೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿದೆ. ನಾನು ಹೆಚ್ಚಾಗಿ ಕಾಮಾಕ್ಷಿಪಾಳ್ಯ ಮತ್ತು ವಿಜಯನಗರ ಪ್ರದೇಶಗಳಲ್ಲಿ ಆಟೋ ಓಡಿಸುತ್ತೇನೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಹಾಗೂ ಕಾಮಾಕ್ಷಿಪಾಳ್ಯ ಸಂಚಾರಿ ಪೊಲೀಸ್ ಠಾಣೆಗಳು 2-3 ರಸ್ತೆಗಳು ಬಿಟ್ಟು ಇವೆ. ಸಾಮಾನ್ಯವಾಗಿ ಎಲ್ಲಾ ಆಟೋ ಚಾಲಕರು ಸಂಚಾರಿ ಪೊಲೀಸರು ಆಟೋಗಳ ದಾಖಲಾತಿಗಳು ಹಾಗೂ ಚಾಲಕರ ಡಿಎಲ್ ಗಳನ್ನು ತಪಾಸಣೆ ಮಾಡುತ್ತಾರೆ ಎಂಬ ಕಾರಣಕ್ಕಾಗಿ ಅವರ ಜೊತೆಗೆ ಚೆನ್ನಾಗಿ ಸಂಬಂಧ ಹೊಂದಿರುತ್ತಾರೆ. ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಯ ಹೊಯ್ಸಳ ಬೀಟ್ಸ್ ಸಿಬ್ಬಂದಿ ಮತ್ತು ಬೀಟ್ಸ್ ಸಿಬ್ಬಂದಿಗಳು ಪರಿಚಯ ಇರುತ್ತಾರೆ. ಸತ್ವ ಅಪಾರ್ಟ್ ಮೆಂಟ್ ಇದು ಸುಮ್ಮನಹಳ್ಳಿ ಜಂಕ್ಷನ್ ವ್ಯಾಪ್ತಿಯಲ್ಲಿ ಇದೆ. ಸುಮ್ಮನಹಳ್ಳಿ ಜಂಕ್ಷನ್ ನಲ್ಲಿ ರಾಜಕುಮಾರ್ ಸಮಾಧಿ ಕಡೆಯಿಂದ ಬರುವ ರಸ್ತೆ, ನಾಗರಬಾವಿ ಕಡೆಯಿಂದ ಬರುವ ರಸ್ತೆ, ಕಾಮಾಕ್ಷಿಪಾಳ್ಯದಿಂದ ಸುಂಕದ ಕಟ್ಟೆ ಕಡೆಗೆ ಹೋಗುವ ರಸ್ತೆಗಳು ಸೇರಿಕೊಳ್ಳುವ ರಸ್ತೆಯಾಗಿದೆ.

ಸುಮ್ಮನಹಳ್ಳಿ ಜಂಕ್ಷನ್ ನಲ್ಲಿ ಬೆಳಗ್ಗೆ ಯಿಂದ ರಾತ್ರಿ 2-3 ಗಂಟೆಯವರೆಗೆ ಹೆಚ್ಚು ವಾಹನಗಳು ಮತ್ತು ಜನರು ಸಂಚರಿಸುತ್ತಾರೆ ಎಂದರೆ ಸರಿ. ಸುಮ್ಮನಹಳ್ಳಿ

ಜಂಕ್ಷನ್ ನಿಂದ ಪಟ್ಟೇಗಾರ ಪಾಳ್ಯ ಮತ್ತು ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್ ಕಡೆಗೆ ಹೋಗಬೇಕಾದಲ್ಲಿ ಸುಮ್ಮನಹಳ್ಳಿ ಜಂಕ್ಷನ್‌ನಿಂದ ಸರ್ವೀಸ್ ರಸ್ತೆಗೆ ಹೋಗಲೇ ಬೇಕು ಎಂದರೆ ಸರಿ.

ನನಗೆ ಎನ್.ವಿ.ಆರ್ ಎಂಬುದರ ವಿಸ್ತೃತ ರೂಪ ಗೊತ್ತಿಲ್ಲ. ಡಿ.ವಿ.ಆರ್ ಇದು ಸಿಸಿಟಿವಿಗೆ ಸಂಬಂಧಿಸಿರುತ್ತದೆ. ಆದರೆ ಅದರ ವಿಸ್ತೃತ ರೂಪ ಗೊತ್ತಿಲ್ಲ. ನಾನು ಹೆಚ್ಚಾಗಿ ಪೊಲೀಸರ ಸಂಪರ್ಕದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ದಿಃ09.06.2024 ರಂದು ಸತ್ವ ಅಪಾರ್ಟ್ ಮೆಂಟ್ ಬಳಿ ಇದ್ದ ಶವವನ್ನು ಎತ್ತುವ ಕಾಲಕ್ಕೆ ನಾನು ಸ್ಥಳದಲ್ಲಿ ಇದ್ದೆನು. ಆ ಸಮಯದ ಸಿಸಿಟಿವಿ ಯಲ್ಲಿ ರೆಕಾರ್ಡ್ ಆಗಿರುತ್ತದೆ, ಅದರಲ್ಲಿಯ ಫೋಟೋವನ್ನು ಸಾಕ್ಷಿದಾರರಿಗೆ ತೋರಿಸಿದ್ದು, ಸಾಕ್ಷಿದಾರರು ಒಪ್ಪಿಕೊಂಡಿರುತ್ತಾರೆ. 11 ಮತ್ತು 12 ನೇ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸದರಿ ಫೋಟೋವನ್ನು ನಿಪಿ.28 ಎಂದು, ಸಾಕ್ಷಿದಾರರು ಇರುವ ಭಾವಚಿತ್ರವನ್ನು ನಿಪಿ.28(ಎ) ಎಂದು ಗುರುತಿಸಲಾಯಿತು.

ಸ್ಥಳದಿಂದ ಶವವನ್ನು ಮಹಜರ್ ಮಾಡಲು ಸ್ಥಳಾಂತರಿಸುವ ಕಾಲಕ್ಕೆ ಪೊಲೀಸರು ತನ್ನಿಂದ ಯಾವುದೇ ರುಜುವನ್ನು ಪಡೆದುಕೊಂಡಿರುವುದಿಲ್ಲ. ಶವವನ್ನು ಸ್ಥಳಾಂತರಿಸುವುದಕ್ಕಾಗಿ ಪೊಲೀಸರು ನನಗೆ ನೋಟೀಸ್ ಕೊಟ್ಟು ಕರೆಸಿರುವುದಿಲ್ಲ. ಪಿಐ ಸುಬ್ರಹ್ಮಣ್ಯ.ಕೆ ಇವರು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಅಧಿಕಾರಿಯಲ್ಲ. ಸಾಕ್ಷಿದಾರರು ಮುಂದುವರಿದು ಅವರು ಗೋವಿಂದರಾಜ್ ನಗರ ಪೊಲೀಸ್ ಠಾಣೆಯ ಅಧಿಕಾರಿ ಎಂದು ನುಡಿದಿರುತ್ತಾರೆ. ಸತ್ವ ಅಪಾರ್ಟ್ ಮೆಂಟ್‌ನಲ್ಲಿ ಸಿಸಿಟಿವಿಯಿಂದ ಹಾರ್ಡ್ ಡಿಸ್ಕ್ ನಲ್ಲಿ ಚಿತ್ರಾವಳಿ (ವಿಡಿಯೋ)

ಯನ್ನು ಕಾಪಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ21.06.2024 ರಂದು ಪೊಲೀಸ್‌ನವರು ಸತ್ವ ಅಪಾರ್ಟ್ ಮೆಂಟ್‌ನಲ್ಲಿ ಇರುವ ಸಿಸಿಟಿವಿಗಳ ಡಿವಿಆರ್ ಗಳನ್ನು ಪಡೆದಿಲ್ಲ. ದಯಾನಂದ್ ಇವರು ಸಿಸಿಟಿವಿ ಫ್ಯೂಟೇಜ್ ನಲ್ಲಿಯ ವಿಡಿಯೋಗಳನ್ನು ಕಾಪಿ ಮಾಡಿ ಕೊಡುವಾಗ ಕೆ.ಸುಬ್ರಹ್ಮಣ್ಯ ಪೊಲೀಸ್ ಅಧಿಕಾರಿಗೆ ಬರವಣಿಗೆಯನ್ನು ಮಾಡಿ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಯಾನಂದ್ ಇವರು ಸತ್ವ ಅಪಾರ್ಟ್ ಮೆಂಟ್ ನಲ್ಲಿಯ ಸಿಸಿಟಿವಿ ಫ್ಯೂಟೇಜ್‌ನಲ್ಲಿಯ ದಿಃ08.06.2024ರ ರಾತ್ರಿ 10.00 ಗಂಟೆಯಿಂದ 10.45 ಗಂಟೆಯವರೆಗಿನ ವಿಡಿಯೋವನ್ನು ಕಾಪಿ ಮಾಡಿಕೊಟ್ಟಿರುತ್ತಾರೆ. ಈ ಮೇಲೆ ಹೇಳಿದ ಸಮಯವು ನಾನು ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿಯುವಾಗ ಗೊತ್ತಿತ್ತು. ಈ ಮೇಲೆ ಹೇಳಿದ ಸಮಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಲು ತೊಂದರೆ ಇರಲಿಲ್ಲ.

ದಿಃ08.06.2024 ಹಾಗೂ ದಿಃ09.06.2024 ರಂದು ಸತ್ವ ಅಪಾರ್ಟ್ ಮೆಂಟ್‌ನಲ್ಲಿ ಸಿಸಿಟಿವಿ ಫ್ಯೂಟೇಜ್ ನಲ್ಲಿಯ ವಿಡಿಯೋಗಳನ್ನು ನೋಡಿದಾಗ ಕೆಂಪು ಮತ್ತು ಬಿಳಿ ಬಣ್ಣದ ವಾಹನಗಳು ಸಾಮಾನ್ಯವಾಗಿ ಸಂಚರಿಸಿರುತ್ತವೆ. ಸತ್ವ ಅಪಾರ್ಟ್ ಮೆಂಟ್‌ಗೆ ಎರಡು ಎಂಟ್ರಿ ಮತ್ತು ಎರಡು ಎಕ್ಸಿಟ್ ಗಳು ಇವೆ ಎಂದರೆ ಸಾಕ್ಷಿದಾರರು ಒಂದು ಎಂಟ್ರಿ ಮತ್ತು ಒಂದು ಎಕ್ಸಿಟ್ ಇದೆ ಎಂದು ನುಡಿದಿರುತ್ತಾರೆ.

ದಿಃ09.06.2024 ರ ರಾತ್ರಿ 1:31:09 ಗಂಟೆಗೆ ಸತ್ವ ಅಪಾರ್ಟ್ ಮೆಂಟ್ ನಿಂದ ಹೊರಗಡೆ ಒಂದು ಕೆಂಪು ಬಣ್ಣದ ಕಾರ್ ಹೋಗುತ್ತಿದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಆ ಭಾಗದ ವಿಡಿಯೋವನ್ನು ತೋರಿಸಿ ಸಾಕ್ಷಿ ಗುರುತಿಸಿದಾಗ ಈ ಮೇಲಿನ ಸಂಗತಿಯನ್ನು ಬರೆದುಕೊಳ್ಳಲಾಗಿದೆ. ದಿಃ09.06.2024 ರ ರಾತ್ರಿ 1:07:06 ಗಂಟೆಗೆ 4 ಜನ ವ್ಯಕ್ತಿಗಳು ಸತ್ವ ಅಪಾರ್ಟ್ ಮೆಂಟ್ ಗೇಟ್ ಕಡೆಗೆ ಬರುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಆ ಭಾಗದ ವಿಡಿಯೋವನ್ನು ತೋರಿಸಿ ಸಾಕ್ಷಿ ಗುರುತಿಸಿದಾಗ ಈ ಮೇಲಿನ ಸಂಗತಿಯನ್ನು ಬರೆದುಕೊಳ್ಳಲಾಗಿದೆ. ದಿಃ09.06.2024 ರ ರಾತ್ರಿ 1:03:00 ಗಂಟೆಗೆ ಸತ್ವ ಅಪಾರ್ಟ್ ಮೆಂಟ್ ಗೇಟ್ ಬಳಿ 4 ಜನ ಸೆಕ್ಯೂರಿಟಿ ಗಾರ್ಡ್ ಗಳು ಇರುವುದು ಕಾಣುತ್ತದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಆ ಭಾಗದ ವಿಡಿಯೋವನ್ನು ತೋರಿಸಿ ಸಾಕ್ಷಿ ಗುರುತಿಸಿದಾಗ ಈ ಮೇಲಿನ ಸಂಗತಿಯನ್ನು ಬರೆದುಕೊಳ್ಳಲಾಗಿದೆ.

ದಿಃ09.06.2024 ರ ರಾತ್ರಿ 1:06:57 ಗಂಟೆಗೆ ಒಂದು ಬಿಳಿ ಬಣ್ಣದ ಕಾರ್ ಸತ್ವ ಅಪಾರ್ಟ್ ಮೆಂಟ್ ಒಳಗಡೆ ಬರುವುದು ಕಾಣುತ್ತದೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಆ ಭಾಗದ ವಿಡಿಯೋವನ್ನು ತೋರಿಸಿ ಸಾಕ್ಷಿ ಗುರುತಿಸಿದಾಗ ಈ ಮೇಲಿನ ಸಂಗತಿಯನ್ನು ಬರೆದುಕೊಳ್ಳಲಾಗಿದೆ. ಸಿಸಿಟಿವಿ ಫ್ಯೂಟೇಜ್ ನಿಂದ ಯಾವ ರೀತಿಯಾಗಿ ವಿಡಿಯೋಗಳನ್ನು ಕಾಪಿ ಮಾಡಿಕೊಳ್ಳುತ್ತಾರೆ ಎನ್ನುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲದೇ ಇದ್ದರೂ ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11 ಮತ್ತು 12 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಉಳಿದ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

3, 5 ಮತ್ತು 10 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

4, 6 ರಿಂದ 9, 13 ರಿಂದ 17 ನೇ ಆರೋಪಿ ಪರ ವಕೀಲರು ತಮ್ಮ ಹಿರಿಯ ವಕೀಲರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸುತ್ತಿದ್ದು ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ. ಸೂಕ್ತ ಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ (ಮಾನ್ಯ ವಿಸಸ ಇವರು ಈ ಸಾಕ್ಷಿಯ ಪಾಟೀ ಸವಾಲಿನ 10 ನೇ ಪುಟದ 2 ನೇ ಪ್ಯಾರಾದ ಮೊದಲನೇ ಸಾಲಿನಲ್ಲಿ ನಿಡಿ.24 ರ ಮುಂದೆ ಕೃತ್ಯ ನಡೆದ ಸ್ಥಳ ಎಂದರೆ ಸರಿ ಎಂದು ಒಪ್ಪಿಕೊಂಡಿದ್ದು, ಅದು ಯಾವ ಸ್ಥಳ ಎಂದು ಸ್ಪಷ್ಟಪಡಿಸುವುದಕ್ಕಾಗಿ ಮರು ವಿಚಾರಣೆಗೆ ಅನುಮತಿ ಕೋರಿ ತಮ್ಮ ವಾದಕ್ಕೆ ಪೂರಕವಾಗಿ ನಿಪಿ.15 ರ ಪುಟ 3 (ಚಾರ್ಜ್ ಶೀಟ್ ಕ್ರಮ ಸಂಖ್ಯೆ 839) ಕೊನೆಯ ಪ್ಯಾರಾದ ಮೊದಲನೇ ಸಾಲಿನಲ್ಲಿ ಶವ ಬಿದ್ದ ಸ್ಥಳ ಅಂತ ಇದ್ದು, ಅದರ ಬಗ್ಗೆ ಸ್ಪಷ್ಟನೆ ಪಡಿಸಬೇಕಾಗಿರುತ್ತದೆ ಎಂದು ವಾದಿಸಿರುತ್ತಾರೆ.

ಇದಕ್ಕೆ ಪ್ರತಿಯಾಗಿ 2, 11 ಮತ್ತು 12 ನೇ ಆರೋಪಿ ಪರ ವಕೀಲರು ನಿಪಿ.15 ರ ಮೊದಲನೇ ಪುಟ (ಚಾರ್ಜ್ ಶೀಟ್ ಕ್ರಮಸಂಖ್ಯೆ 837) ರ ಕೊನೆಯ ಸಾಲಿನಲ್ಲಿ ಹೇಳಿರುವಂತೆ "ಕೃತ್ಯ ದಿನದ ದಾಖಲಾದ ವಿದ್ಯಮಾನಗಳು" ಅಂತ

ನಮೂದಿಸಿದ್ದು ಅದರಿಂದ ಅದು ಕೃತ್ಯ ನಡೆದ ಸ್ಥಳವಾಗಿರುತ್ತದೆ ಎಂದು ವಾದಿಸಿ, ಈ ಸಾಕ್ಷಿ ಪ್ರತ್ಯಕ್ಷದರ್ಶಿಯಲ್ಲ ಎಂದು ಪ್ರತಿಪಾದಿಸಿರುತ್ತಾರೆ.

(ನ್ಯಾಯಾಲಯವು ಚಾರ್ಜ್ ಶೀಟ್, ನಿಪಿ.15, ಸಾಕ್ಷಿದಾರರ ಪಾಟೀ ಸವಾಲನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ಶವ ಎಸೆದ ಸ್ಥಳದ ಪಕ್ಕದಲ್ಲಿರುವ ಸಿಸಿಟಿವಿಯ ದೃಶ್ಯಾವಳಿಯನ್ನು ಕಾಪಿ ಮಾಡಿಕೊಳ್ಳುವ ಕಾಲಕ್ಕೆ ಸಾಕ್ಷಿಯೂಗಿದ್ದು ಕೃತ್ಯ ಎಂದರೆ ಏನು, ಅದು ಯಾವ ಸ್ಥಳ ಎಂದು ತಿಳಿದುಕೊಳ್ಳಲು ಸ್ಪಷ್ಟನೆ ಬೇಕಾಗಿರುವುದರಿಂದ ಮರು ವಿಚಾರಣೆ ಮಾಡಲು ಅನುಮತಿ ನೀಡಲಾಯಿತು).

ಕೃತ್ಯದ ಸ್ಥಳ ಎಂದರೆ ಶವ ಬಿದ್ದ ಸ್ಥಳ. ಶವ ಮಹಜರ್ ಮಾಡಿದ ಕಾಲಕ್ಕೆ ಚಾರ್ಜ್ ಶೀಟ್ ಪುಟ ಸಂಖ್ಯೆ 272 ರಲ್ಲಿ ನನ್ನ ರುಜು, ಹೆಸರು ಮತ್ತು ವಿಳಾಸ ಇದೆ. ನಿಪಿ.14 ರಲ್ಲಿ ನನ್ನ ಹೆಸರು, ವಿಳಾಸ ಮತ್ತು ಮೊಬೈಲ್ ನಂಬರ್ ಇದೆ.

ಪಾಟೀ ಸವಾಲುಃ 2, 11 ಮತ್ತು 12 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಅವಕಾಶ ಕೇಳಿದ್ದು, ಈ ಸಾಕ್ಷಿಯ ಮುಖ್ಯ ವಿಚಾರಣೆ, ಪಾಟೀ ಸವಾಲು, ಮರುವಿಚಾರಣೆ, ನಿಪಿ.14, ನಿಪಿ.15 ಮತ್ತು ದಿಃ11.06.2024 ರ ಶವ ಮಹಜರನ್ನು ಪರಿಶೀಲಿಸಿದಾಗ ಮರು ವಿಚಾರಣೆ ಕಾಲಕ್ಕೆ ಅಭಿಯೋಜನೆಯವರು ನ್ಯಾಯಾಲಯದ ಮುಂದೆ ಯಾವುದೇ ಹೊಸ

ವಿಚಾರವನ್ನು ಮರುವಿಚಾರಣೆಯಲ್ಲಿ ತಂದಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ಮಾಡಿದ ವಿನಂತಿಯನ್ನು ವಜಾ ಮಾಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.